# ಶ್ರೀ ಪ್ರಸನ್ನವೆಂಕಟದಾಸರ ಆತ್ಮನಿವೇದನೆಯ ಕೆಲವು ಕೀರ್ತನೆಗಳು

**ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಹರಿದಾಸರಲ್ಲಿ ಬಾಗಲಕೋಟೆಯ ಪ್ರಸನ್ನವೆಂಕಟದಾಸರ [ಕ್ರಿ.ಶ 1650–1720][*1] ಹೆಸರು ಬಹು ದೊಡ್ಡದು. ಅವರ ಕೀರ್ತನೆಗಳು ಸಾಹಿತ್ಯದ ದೃಷ್ಟಿಯಿಂದ, ಸಾಧನೆಯ ದೃಷ್ಟಿಯಿಂದ ಬಹು ಮುಖ್ಯವಾಗಿವೆ. ಅವರ ಸುಮಾರು 450 ಕೀರ್ತನೆಗಳಲ್ಲಿ ಆತ್ಮ ನಿವೇದನೆಯ ಕೆಲವು ಕೀರ್ತನೆಗಳನ್ನು ಇಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ದಾಸರು ದೈವಸಾಕ್ಷಾತ್ಕಾರಕ್ಕಾಗಿ ತಮ್ಮ ಜೀವನವನ್ನು ಮೀಸಲಿಟ್ಟವರು. ಅದಕ್ಕಾಗಿ ಮೊದಲು ತಾವು ನಂಬಿದ ದೈವದ ಎದುರು ತಮ್ಮ ಅಪರಾಧಗಳನ್ನು, ಸುಖ ದುಃಖಗಳನ್ನು ನಿವೇದಿಸಿಕೊಳ್ಳುವರು. ಪರಮಾತ್ಮನ ದಾಸರೆಂದು ತಮ್ಮನ್ನು ಗುರುತಿಸಿಕೊಳ್ಳಲು ಅವರು ಭಗವಂತನಲ್ಲೇ ಪ್ರಾರ್ಥಿಸುತ್ತಾರೆ. ನಿರಂತರ ಭಗವಂತನ ಕೈಂಕರ್ಯವನ್ನು ನಿರ್ವಹಿಸುತ್ತಾರೆ.

‘ಭಗವಂತನಲ್ಲಿ ಸರ್ವಸ್ವವನ್ನೂ ಸಮರ್ಪಿಸಿ ಸುಖ ದುಃಖಗಳನ್ನು ಸರಿಸಮಾನವಾಗಿ ಕಂಡು, ಯಾರು ಯಾವಾಗಲೂ ಸಂತುಷ್ಟರಾಗಿ, ಜಗಕ್ಕೆ ಯಾವ ಕೆಡುಕನ್ನೂ ಉಂಟು ಮಾಡದೆ, ಜನರಿಂದ ತಮಗಾಗುವ ಯಾವ

***1. ವಿ.ಸೂ.: ಡಾ. ಎ. ಟಿ. ಪಾಟೀಲರ ಸಂಶೋಧನೆ ಗ್ರಂಥದಲ್ಲಿ ಹಾಗೂ ಸಮಗ್ರ ದಾಸಸಾಹಿತ್ಯ ಸಂಪುಟ–8ರಲ್ಲಿ ಶ್ರೀ ಪ್ರಸನ್ನವೆಂಕಟದಾಸರ ಕಾಲ ಕ್ರಿ.ಶ.1680–1752ಎಂದು ದಾಖಲಿಸಲಾಗಿದೆ. ಇಲ್ಲಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿಅವರು ದಾಸರ ಕಾಲ 1650–1720 ಎಮದು ದಾಖಲಿಸಿದ್ದಾರೆ. ಇದು ಅವರ ಸ್ವಂತ ಅಭಿಪ್ರಾಯ.**

ತೊಂದರೆಗಳನ್ನೂ ಲಕ್ಷಿಸದೆ ನನ್ನಲ್ಲಿಯೇ ಅನುರಕ್ತರಾಗುತ್ತಾರೆಯೋ ಅವರೇ ನನ್ನ ಭಕ್ತರು. ಅಂಥವರನ್ನು ನಾನು ತಡಮಾಡದೆ ಸಂಸಾರ ಸಾಗರದಿಂದ ಉದ್ಧಾರ ಮಾಡುತ್ತೇನೆ' ಎಂದು ಕೃಷ್ಣನೇ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಇದರಿಂದ ಭಗವಂತನಿಗೆ ತನ್ನ ಭಕ್ತರ ಬಗ್ಗೆ ಇರುವ ಮಮತೆ, ವಾತ್ಸಲ್ಯಗಳು ವ್ಯಕ್ತವಾಗುತ್ತವೆ. ಅದರಿಂದಾಗಿ ಭಗವಂತನನ್ನು ನಂಬಿದ ದಾಸರು ತಮ್ಮ ಸರ್ವಸ್ವವನ್ನೂ ಆತನಿಗೆ ಅರ್ಪಿಸಿದರು.

**'ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ**
**ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ**
**ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ**
**ಕ್ರಿಯತೆ ಭಗವತ್ಯದ್ಧಾ ತನ್ಮನ್ಯೇಧೀತಮುತ್ತಮಂ'**

ಎಂಬುದು ಭಾಗವತದ ಉಕ್ತಿ. ಇದನ್ನೆ ಒಂಭತ್ತು ವಿಧದ ಭಕ್ತಿಮಾರ್ಗಗಳೆಂದು ಕರೆಯಲಾಗುತ್ತದೆ. ಸಂಸ್ಕೃತದ ಇನ್ನೊಂದು ಉಕ್ತಿಯಂತೆ ಈ ನವವಿಧ ಮಾರ್ಗಗಳನ್ನು ಅನುಸರಿಸಿ ಕೃತ ಕೃತ್ಯರಾದ ಭಕ್ತರನ್ನೂ ಹೆಸರಿಸಲಾಗುತ್ತದೆ. ಶ್ರವಣದಿಂದ ಪರೀಕ್ಷಿತರಾಜನು, ಕೀರ್ತನೆಯಿಂದ ನಾರದರು, ಸ್ಮರಣೆಯಿಂದ ಪ್ರಲ್ಹಾದ, ಪಾದಸೇವನೆಯಿಂದ ಲಕ್ಷ್ಮೀದೇವಿ, ಪೂಜೆಯಿಂದ ಪೃಥು ಮಹಾರಾಜ, ಅಭಿವಂದನೆಯಿಂದ ಅಕ್ರೂರ, ದಾಸ್ಯದಿಂದ ಹನುಮಂತ, ಸಖ್ಯದಿಂದ ಅರ್ಜುನ, ಆತ್ಮ ನಿವೇದನೆ, ಸರ್ವಾರ್ಪಣದಿಂದ ಬಲಿಚಕ್ರವರ್ತಿ. ಹೀಗೆ ಇವರೆಲ್ಲರೂ ನವ ವಿಧ ಭಕ್ತಿ ಮಾರ್ಗಗಳಿಂದ ಒಂದೇ ತೆರನಾದ ಮುಕ್ತಿಯನ್ನು ಪಡೆದರೆಂದು ಹೇಳಲಾಗುತ್ತದೆ. ಅಂದರೆ ಇವುಗಳೆಲ್ಲವೂ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರತ್ಯೇಕ ಮಾರ್ಗಗಳೆಂದು ಹೇಳಿದಂತಾಯಿತು.

ನವವಿಧ ಭಕ್ತಿಗಳ ಮೇಲೆ ಹಲವಾರು ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಒಬ್ಬ ವಿದ್ವಾಂಸರು ಈ ನವವಿಧ ಭಕ್ತಿಗಳಲ್ಲಿ ಮೊದಲ ಆರು ಅಂಶಗಳು ಸಾಧನ ಭಾಗವೆಂದು, ಉಳಿದ ಮೂರು ಅಂಶಗಳು ಭಕ್ತಿ ಭಾವಗಳೆಂದು ಹೇಳಿದ್ದಾರೆ.

'ದಾಸ್ಯ ಸಖ್ಯ ಮತ್ತು ಆತ್ಮನಿವೇದನೆಗಳು ಭಕ್ತಿಭಾವಗಳು. ಅವುಗಳು ಸಾಧಕನ ಪ್ರಾರಂಭದ ಹಂತಗಳಿಂದಲೇ ಕ್ರಮ ಕ್ರಮವಾಗಿ ಬೆಳೆಯತೊಡಗಿದರೂ, ಸಾಧಕನ ಜೀವನದ ಪರಿಪಕ್ವದೆಸೆಯಲ್ಲಿ ಮಾತ್ರವೇ ಬಲವಾಗಿ ಬೇರೂರಿ ವೈಶಿಷ್ಟ್ಯಪೂರ್ಣವಾಗಿ ರೂಪುಗೊಳ್ಳುತ್ತವೆ' ಎಂಬುದು ಇನ್ನೊಂದು ಅಭಿಪ್ರಾಯ.

'ನವವಿಧ ಭಕ್ತಿಮಾರ್ಗದಲ್ಲಿ ಶ್ರವಣ ಕೀರ್ತನ ಸ್ಮರಣ ಎಂಬುವು ಧ್ಯಾನಕ್ಕೂ; ಪಾದಸೇವನ, ಅರ್ಚನ ಮತ್ತು ವಂದನ ಎಂಬುವು ಭಗವತ್ಪ್ರೀತ್ಯರ್ಥವಾಗಿ ಮಾಡುವ ಕ್ರಿಯೆಗಳು; ದಾಸ್ಯ ಸಖ್ಯ ಮತ್ತು ಆತ್ಮನಿವೇದನೆ ಎಂಬುವು ಶೇಷಭಾವ ಮತ್ತು ಶರಣಾಗತಿಗೂ ಅನ್ವಯಿಸುವವು' ಎಂಬುದಾಗಿ ಮತ್ತೊಬ್ಬರು ಹೇಳುತ್ತಾರೆ.

ನವವಿಧ ಭಕ್ತಿಗಳನ್ನು ಮೆಟ್ಟಿಲು ಮೆಟ್ಟಿಲುಗಳನ್ನಾಗಿ ಪರಿಗಣಿಸಬಹುದೇ ಅಥವಾ ಅವುಗಳಲ್ಲಿ ಒಂದೊಂದೂ ಪ್ರತ್ಯೇಕವಾದವುಗಳೇ ಎಂಬ ಸಂದೇಹವೂ ವಿದ್ವಾಂಸರಲ್ಲಿದೆ. ಹಾಗೆ ನೋಡಿದರೆ, ಪ್ರತಿಯೊಂದೂ ಪ್ರತ್ಯೇಕವಾದ ಮಾರ್ಗವೆಂದೂ, ಆಯಾ ಸಾಧನೆಗಳ ಮೂಲಕ ಭಗವಂತನ ಅನುಗ್ರಹಕ್ಕೆ ಪಾತ್ರರಾದವರ ಪಟ್ಟಿಯನ್ನೂ ನೋಡಿಯಾಗಿದೆ.

'ಭಕ್ತಿಗಳಲ್ಲಿ ಕೊನೆಯದಾಗಿ ಬರುವ ಆತ್ಮನಿವೇದನೆಯೇ ಅತ್ಯಂತ ಶ್ರೇಷ್ಠವಾದುದೆಂದು ಗಣಿಸಿದರೆ, ಉಳಿದವುಗಳು ಈ ಹಂತಕ್ಕೆ ಬರಲು ಒಂದೊಂದು ಹಂತವೆಂದು ಭಾವಿಸಬಹುದು. ಸಾಮಾನ್ಯನಾದ ಭಕ್ತನೊಬ್ಬನು ದೇವರ ಕೀರ್ತಿಯ ಶ್ರವಣದಿಂದ ಆಕರ್ಷಿತನಾಗಿ, ಆತನ ನಾಮ ಸಂಕೀರ್ತನೆಯಲ್ಲಿ ತೊಡಗಿ, ಭಗವಂತನ ಸ್ಮರಣೆಯಿಂದ ಸರ್ವದಾ ಸಂತೃಪ್ತನಾಗಿ, ತನ್ನ ಇಷ್ಟ ದೇವತೆಯ ಪಾದಸೇವನೆ, ಅರ್ಚನೆ ಮತ್ತು ವಂದನೆಗಳ ಮೂಲಕ ಭಗವಂತನ ದಾಸ್ಯವನ್ನು ಕೈಕೊಂಡು, ಪರಮಾತ್ಮನಲ್ಲಿ ಸಖ್ಯವನ್ನು ಬೆಳೆಸಿ ಕಡೆಗೆ ಆತ್ಮನಿವೇದನೆಯಿಂದ, ಸರ್ವ ಸಮರ್ಪಣದಿಂದ ಸಿದ್ಧಿಯನ್ನು ಪಡೆಯಬಹುದು'

ಎಂಬ ಅಭಿಪ್ರಾಯವೂ ಇದೆ. ಪ್ರಸನ್ನವೆಂಕಟದಾಸರು ನವವಿಧ ಭಕುತಿಯ ಬಗ್ಗೆ ತಮ್ಮ ಅನೇಕ ಕೀರ್ತನೆಗಳಲ್ಲಿ ಪ್ರಸ್ತಾಪಿಸಿದ್ದಾರೆ. ಒಂದು ನುಡಿಯನ್ನು ನೋಡುವುದಾದರೆ,

**'ಪೂರ್ಣಪ್ರಜ್ಞರ ಮತ ನವಭಕುತಿಗಳ । ನಿರ್ಣಯದಲಿ**
**ತರತಮವಿಲ್ಲದೆ ॥**
**ಅರ್ಣವ ಕಲಿತೇನಿನ್ನಾಕಾಶ ಚರಿಸೇನು । ಪೂರ್ಣ**
**ಪ್ರಸನ್ವೆಂಕಟೇಶನೊಪ್ಪಿರದೆ ॥**

ಇದಿಷ್ಟು 'ಆತ್ಮನಿವೇದನೆ'ಯ ಕುರಿತಾದ ಪ್ರಾಸ್ತಾವಿಕ.

ಹರಿದಾಸ ಶಬ್ದದಲ್ಲಿಯೆ ಹೇಳಿದಂತೆ ಹರಿದಾಸರು ಹರಿಯ ದಾಸರು. ಹರಿದಾಸ್ಯವನ್ನು ಒಪ್ಪಿದನಂತರ ಅವರಿಗೆ ಹರಿಯನ್ನು ಬಿಟ್ಟು ಇನ್ನಾರೂ ಮುಖ್ಯರಲ್ಲ. ಹರಿಯನ್ನು ಉಪಾಸಿಸಲು ಕರ್ನಾಟಕದ ಹರಿದಾಸರಿಗೆ ಮಧ್ವಾಚಾರ್ಯರ ಸಿದ್ಧಾಂತ ಬುನಾದಿಯಾಯಿತು. ಅದರಲ್ಲೂ ಸಿದ್ಧಾಂತಕ್ಕಿಂತ ಸಾಧನೆಗೆ ಹರಿದಾಸರು ಒತ್ತು ಕೊಟ್ಟರು. ಅವರ ಮುಖ್ಯ ಗುರಿ ಹರಿಯನ್ನು ಕಾಣುವುದು ಮತ್ತು ಭವಸಾಗರದಿಂದ ಮುಕ್ತಿಯನ್ನು ಪಡೆಯುವುದೇ ಆಗಿದೆ. ಅದನ್ನು ಸಾಧಿಸುವುದು ಅವರ ಧ್ಯೇಯವಾಗಿತ್ತು. ಅದಕ್ಕೆ ಮಾಧ್ವರಲ್ಲಿ 'ಬಿಂಬೋಪಸನೆ' ಕ್ರಮ ಎಂದು ಹೆಸರು.

ಹರಿಯ ಕೃಪೆಯನ್ನು ಪಡೆಯುವುದು ಮತ್ತು ಮುಕ್ತಿಯನ್ನು ಪಡೆಯುವ ಸುಲಭ ಸಾಧನೆಯನ್ನು ಶ್ರೀ ವಾದಿರಾಜಯತಿಗಳು ತಮ್ಮ ಒಂದು ಕೀರ್ತನೆಯಲ್ಲಿ ಅತ್ಯಂತ ಸುಂದರವಾಗಿ, ಸಂಕ್ಷಿಪ್ತವಾಗಿ ಮೂರು ಸಾಲುಗಳಲ್ಲಿ ಹೀಗೆ ಹೇಳಿದ್ದಾರೆ.

**'ಆವನ ಶ್ರವಣ ಮನನ ನಿಧಿಧ್ಯಾಸನ**
**ಆ ವಿಷ್ಣುವಿನ ಭಕ್ತಿ ಮಹಾ ಪ್ರಸಾದಂಗಳು**
**ಕೈವಲ್ಯ ಪದಕೆ ಇಕ್ಕಿದ ನಿಚ್ಚಣಿಕೆ'**

ಸಚ್ಛಾಸ್ತ್ರಗಳನ್ನು ಯೋಗ್ಯ ಗುರುಗಳಲ್ಲಿ ಅಭ್ಯಾಸ ಮಾಡಿ ಯಾವನ [ಭಗವಂತನ] ಬಗ್ಗೆ ತಿಳಿಯುವುದು ಶ್ರವಣವೆನಿಸುತ್ತದೆ. ಅವುಗಳ ತಾತ್ಪರ್ಯವನ್ನು ಮನಸ್ಸಿನಲ್ಲಿ ಗಟ್ಟಿ ಮಾಡಿಕೊಳ್ಳುವುದು ಮನನ. ಆ ತಾತ್ಪರ್ಯದಲ್ಲಿ ಅತಿ ಮುಖ್ಯವಾದ ವಿಷ್ಣು ತತ್ವ ಅಥವಾ ಹರಿ ತತ್ವದಲ್ಲಿ ಮನಸ್ಸನ್ನು ನೆಲೆಗೊಳ್ಳುವಂತೆ ಮಾಡುವುದು ನಿಧಿಧ್ಯಾಸನ ಎನಿಸುತ್ತದೆ. ಇದನ್ನು ಶ್ರೀ ಮಧ್ವಾಚಾರ್ಯರು ಆ ಮೊದಲೆ 'ಧ್ಯಾನಂ ನಿಶ್ಚಿತ ತತ್ವಸ್ಯ' ಎಂದು ಸಾಧನ ಮಾರ್ಗವನ್ನು ಸೂಚಿಸಿದ್ದಾರೆ. ಧ್ಯಾನವೆಂದರೆ ಎಡೆಬಿಡದ ಚಿಂತನೆ. ಇದುವೆ ನಿರಂತರವಾದ ಬಿಂಬೋಪಾಸನೆ. ಇದನ್ನು ಸಾಧಿಸಲು ಶ್ರವಣ ಮನನ ಮತ್ತು ನಿಧಿಧ್ಯಾಸನಗಳು. ಇವುಗಳು ಕೈವಲ್ಯ ಪದವನ್ನು ಪಡೆಯಲು ನಿಚ್ಚಣಿಕೆ ಎಂದು ಶ್ರೀ ವಾದಿರಾಜತೀರ್ಥರು ಹೇಳಿದರಾದರೂ ಅವುಗಳು ಕೂಡ ಆ ವಿಷ್ಣುವಿನ ಭಕ್ತಿ ಮಹಾ ಪ್ರಸಾದಂಗಳು ಎಂದು ಹೇಳಿದ್ದಾರೆ.

ಆದ್ದರಿಂದ ಬಿಂಬೋಪಾಸನೆಯ ಉಪಾಸನೆಗೆ ಹೋಗಲು ಕೂಡ ಪರಮಾತ್ಮನ ಕೃಪೆ ಬೇಕು. ಉಪಾಸನೆಗೆ ಮನಸ್ಸನ್ನು ಗಟ್ಟಿ ಮಾಡಿಕೊಳ್ಳಲು ಮತ್ತೆ ಅನೇಕ ದಾರಿಗಳು ಅವುಗಳಲ್ಲಿ ಮುಖ್ಯವಾದುವು, ಇಂದ್ರಿಯ ನಿಗ್ರಹ, ಗುರೂಪದೇಶ, ವಿರಕ್ತಿ, ಸಾಧುಸಂಗ, ಹರಿಕಥಾ ಶ್ರವಣ, ಮತ್ತು ನಾಮಸ್ಮರಣೆ. ಇವುಗಳಿಂದ ಮನಸ್ಸನ್ನು ಪಕ್ವಗೊಳಿಸಿದ ಮೇಲೆ ಬಿಂಬೋಪಾನೆಯ ಉಪಾಸನೆ. ಪಕ್ವವಾದ ಮನಸ್ಸು ಮತ್ತು ಬಿಂಬೋಪಾಸನೆಯ ಮಧ್ಯದ ಅವಸ್ಥೆ ಆತ್ಮನಿವೇದನೆಯದ್ದು ಎನ್ನಬಹುದು. ಆತ್ಮ ಸಾಕ್ಷಾತ್ಕಾರದ ನಂತರವೂ ಇರುವವರೆಗೆ ಭಗವಂತನಲ್ಲಿ ಆತ್ಮ ನಿವೇದನೆ ನಿರಂತರ ನಡೆಯಬೇಕು.

ಪರಮಾತ್ಮನ ಸತತವಾದ ನಾಮಸ್ಮರಣೆಯಿಂದ, ಅವನ ಗುಣ ರೂಪಗಳ ವರ್ಣನೆಯಿಂದ, ಅವನ ಮಹಾತ್ಮ್ಯೆಗಳ ತಿಳುವಳಿಕೆಯಿಂದ ಮನಸ್ಸು ಗಟ್ಟಿಯಾಗಿದೆ. ಅದು ತಿಳಿಯದೆ ಮನಸ್ಸು ಹರಿಯಲ್ಲಿ ನೆಲೆಗೊಳ್ಳಲು ಸಾಧ್ಯವಾಗುವುದಿಲ್ಲ. ಸಾಧಕರು ಇದನ್ನು ರಾಮಾಯಣ, ಮಹಾಭಾರತ ಮತ್ತು ಭಾಗವತಗಳ ಸತತ ಅಧ್ಯಯನದಿಂದ ಕಂಡುಕೊಂಡರು. ಅನಂತರದ

ಮೆಟ್ಟಿಲು ಎಂದರೆ, ಈಗ ಆತನ ದರ್ಶನವಾಗಬೇಕು. ಆಗಲೊಲ್ಲದು. ಆದರೆ ಅವನ ಸಂಪರ್ಕ ಬಂದಿದೆ. ಆತನನ್ನು ನೋಡುವ ದಾರಿಯಲ್ಲೇ ಇದ್ದಾರೆ. ಈಗ ಬೇರೆ ಯಾರೂ ಬೇಡ. ಅಂತೆಯೇ ಅವನಲ್ಲಿ ಆತ್ಮ ನಿವೇದನೆ.

ಪ್ರಸನ್ನವೆಂಕಟದಾಸರ ಮನಸ್ಸು ಗಟ್ಟಿಯಾಗಿದೆ. ಆತ್ಮ ಜಾಗೃತವಾಗಿದೆ. ಆದರೆ ಪರಮಾತ್ಮನ ದರ್ಶನ ಅಂತರಂಗದಲ್ಲಿ ಆಗಿರಬಹುದು, ಆಗಿರಲಿಕ್ಕಿಲ್ಲ. ದರ್ಶನವಾಗಿದ್ದರೂ ಮತ್ತೆ ಮತ್ತೆ ಅದಕ್ಕಾಗಿ ಪರತಪಿಸುತ್ತಿರುವಾಗ, ಪರಮಾತ್ಮನನ್ನೇ ಮೊರೆಹೊಕ್ಕರು. ಆಗ ಹೊರ ಹೊಮ್ಮಿದ ನೂರಾರು ಕೀರ್ತನೆಗಳು, ಆತ್ಮನಿವೇದನೆಯ ಕೀರ್ತನೆಗಳು.

ಪ್ರಸನ್ನವೆಂಕಟದಾಸರು ಈ ಹಂತಕ್ಕೆ ಬರುವವರೆಗೆ ನಿರಂತರ ಸಾಧನೆಯನ್ನು ಮಾಡುತ್ತಿದ್ದರು ಎನ್ನಲು ಅವರ ಅನೇಕ ಕೀರ್ತನೆಗಳು ಸಾಕ್ಷಿಯಾಗಿವೆ. ಗುರುಭಕ್ತಿಯ ಕೀರ್ತನೆಗಳು, ಪರಿವಾರ ದೇವತೆಗಳ ಕೀರ್ತನೆಗಳು ಅಲ್ಲದೆ ಪರಮಾತ್ಮನಲ್ಲಿ ನವವಿಧ ಭಕ್ತಿಯನ್ನು ತೋರಿಸಿದ ಕೀರ್ತನೆಗಳು. ಸಮಸ್ತ ನಾಮ ಮಣಿಗಣ ಷಟ್ಚರಣ ಪದ್ಯಮಾಲೆ, ನಾರಾಯಣ ಪಂಜರ ಮೊದಲಾದವುಗಳೊಂದಿಗೆ ಭಾಗವತದ ದಶಮಸ್ಕಂದವನ್ನು ಕನ್ನಡೀಕರಣಗೊಳಿಸಿದ್ದನ್ನು ನೋಡಿದರೆ ಅವರು ಭಾಗವತದಲ್ಲಿ ಮತ್ತು ಭಗವಂತನಲ್ಲಿ ಎಷ್ಟೊಂದು ಲೀನವಾಗಿದ್ದರು ಎಂಬುದು ಗೊತ್ತಾಗುತ್ತದೆ. ಇವುಗಳೆಲ್ಲದರಿಂದ ಅವರ ಮನಸ್ಸು ಪಕ್ವವಾಗಿತ್ತು. ಆದರೂ ಪರಮಾತ್ಮನನ್ನು ಬೇಡಿಕೊಳ್ಳುತ್ತಾರೆ.

ಪ್ರಸನ್ನವೆಂಕಟದಾಸರ ಮನಸ್ಸು ಪಕ್ವವಾಗಿತ್ತು ನಿಜ, ಆದರೆ ಅದು ತನ್ನ ಚಂಚಲತೆಯನ್ನು ಇನ್ನೂ ಬಿಟ್ಟಿರಲಿಲ್ಲ. ಅಂಥ ಸಂದರ್ಭದಲ್ಲಿ ದಾಸರು ಮತ್ತೆ ಮತ್ತೆ ತಮ್ಮ ಮನಸ್ಸಿಗೆ ಹೇಳಿಕೊಳ್ಳುತ್ತಿದ್ದಾರೆ. ಮೂರು ನುಡಿಗಳ ಒಂದು ಕೀರ್ತನೆಯಲ್ಲಿ ಮನಸ್ಸಿಗೆ ಕಾಡಬೇಡ ಎನ್ನುತ್ತಾರೆ.

**‘ಕಾಡದಿರೆನ್ನ ಕಿಡಿಗೇಡಿ ಮನವೆ**
**ಓಡದಿರು, ಅಚ್ಯುತಾಂಘ್ರಿ ನೋಡು ಮನವೆ’**

ಎಂಬ ಪಲ್ಲವಿಯೊಂದಿಗೆ ಪ್ರಾರಂಭಿಸುವ ಕೀರ್ತನೆಯಲ್ಲಿ, ಮನಸ್ಸು ತುಂಬ ಕಿಡಿಗೇಡಿಯಾದದ್ದು ಎಂದು ಎಚ್ಚರಿಸುತ್ತಾರೆ. ಹೀಗೆ ಅದು ಸರಿದಾರಿಯಲ್ಲಿ ಇದೆ ಎನ್ನುತ್ತಿರುವಾಗಲೇ ಇನ್ನೆಲ್ಲೊ ಓಡಿ ಕಿಡಿಗೇಡಿತನವನ್ನು ಪ್ರದರ್ಶಿಸುತ್ತದೆ. ಆದ್ದರಿಂದ ಮನಸ್ಸಿಗೆ ಹೇಳುತ್ತಾರೆ. ಹಾಗೆ ಓಡಬೇಡ. ಅಚ್ಯುತನ ಪಾದಗಳನ್ನು ಮಾತ್ರ ನೋಡು ಎಂದು ಎಚ್ಚರಿಸಿದ್ದಾರೆ. ಮತ್ತೆ ಮುಂದುವರಿದು,

**'ಬೆಲೆಯಿಲ್ಲದಾಯು ರತ್ನದ ಮಾಲೆ ಹರಿದಿದೆ**
**ಆಲಸಿಕ್ಯಾತಕೆ ಹರಿಯ ಊಳಿಗಕೆ'**

ಬೆಲೆಯಿಲ್ಲದ ಆಯುಷ್ಯದ ರತ್ನದ ಮಾಲೆ ಹರಿದಿದೆ. ಸುಂದರ ದೃಷ್ಟಾಂತ. ಆಯುಷ್ಯದ ರತ್ನ ಎಂಬುದು ಅಮೌಲ್ಯವೂ ಹೌದು. ಬೆಲೆಯೇ ಇಲ್ಲದ್ದೂ ಹೌದು. ಅವರ ವಿಚಾರಗಳು ಪಕ್ವವಾಗಿವೆ ಎಂಬುದಕ್ಕೂ ಒಂದು ಸ್ಪಷ್ಟ ಸಾಕ್ಷಿಯಾಗಿದೆ. ಈ ಮನುಷ್ಯ ದೇಹದ ಆಯುಷ್ಯವು ರತ್ನಗಳಿಂದ ಕೂಡಿದ ಮಾಲೆ. ಅದು ಹರಿದು ಹೋಗಿದೆ ಎಂದು ಮನವರಿಕೆಯಾಗಿದೆ. ಅಂದಮೇಲೆ ಮತ್ಯಾಕೆ ಚಿಂತೆ ? ಇನ್ನು ಹರಿಯ ಸೇವೆಯಲ್ಲಿ ಮಾತ್ರ ನಿರತನಾಗು. ಅವನ ಊಳಿಗವನ್ನು ಮಾತ್ರ ಮಾಡು ಎಂದು ಮನಸ್ಸಿಗೆ ಹೇಳಿದ್ದಾರೆ. ಆಗ ಮಾತ್ರ ಮುಕ್ತಿಯನ್ನು ಪಡೆಯಬಹುದು ಎಂಬ ಸುಳಿವನ್ನು ಕೊಡುತ್ತಾರೆ.

**'ಕಂಡ ಕಡೆಯಲಿ ತಿರುಗಿ ಬಳಲಿದೆಯಲ್ಲದೆ ಬೇರೆ**
**ಉಂಡುಟ್ಟು ಸುಖಿಸಿ ಯಶಸೊದಗಲಿಲ್ಲ**
**ಪುಂಡರೀಕಾಕ್ಷಾಂಘ್ರಿ ಪುಂಡರೀಕವ ಹೊಂದಿ**
**ಬಂಡುಣಿಯೆನಿಪರ ಸೇರು ಸಾರು'**

ಆಗಲೆ ಈ ಮನಸ್ಸು ಕಂಡ ಕಂಡ ಕಡೆಗೆ ತಿರುಗಿ ಸಾಕಷ್ಟು ಬಳಲಿದೆ. ಉಂಡು ಉಟ್ಟು ಸುಖಿಸಿದೆಯಾದರೂ ನಿಜವಾದ ಯಶಸ್ಸು ಸಿಕ್ಕಿಲ್ಲ. ನಿಜವಾದ ಯಶಸ್ಸು ಇರುವುದು, ಪುಂಡರೀಕಾಕ್ಷನ, ಅಂದರೆ ಪರಮಾತ್ಮನ

ಪಾದಕಮಲಗಳನ್ನು ಹೊಂದಿ, ಮಧುವನ್ನು ಹೀರುವ ಭ್ರಮರಗಳ ಸಾಲಿನಲ್ಲಿ ಸೇರಿದಾಗ ಮಾತ್ರ ಅದು ನಿಜವಾದ ಯಶಸ್ಸು. ಅದನ್ನೇ ಎಲ್ಲರಿಗೂ ಹೇಳು ಎಂದು ಮನಸ್ಸನ್ನು ಎಚ್ಚರಿಸಿದ್ದಾರೆ.

**'ಗೋವರಂತಖಿಳ ಪಶುಗಳನು ದಾತಾರನಿಗೆ**
**ತಾವು ಒಪ್ಪಿಸುವ ಪರಿ ಸತಿಸುತರನು**
**ದೇವದೇವ ಪ್ರಸನ್ನವೆಂಕಟಗರ್ಪಿಸಿ**
**ಹೇವ ಹೆಮ್ಮೆಯ ಬಿಟ್ಟು ಸತತ ಹೊಗಳದೆ'**

ಪ್ರತಿದಿನ ಹೊಲ ಗದ್ದೆಗಳಲ್ಲಿ ಮೇಯಿಸಿಕೊಂಡು ಬಂದು, ಸಾಯಂಕಾಲ ತಾವು ಕೊಂಡೊಯ್ದ ಎಲ್ಲ ಪಶುಗಳನ್ನು ಒಡೆಯನಿಗೆ ಒಪ್ಪಿಸುವ ಗೋವಳನಂತೆ, ಮನುಷ್ಯ ದೇಹ ಬಂದಮೇಲೆ ಇಲ್ಲಿಯ ನಿಯಮದಂತೆ ಮದುವೆಯಾದ ಹೆಂಡತಿಯನ್ನು ಪಡೆದ ಮಕ್ಕಳ ಜವಾಬ್ದಾರಿ ಮುಗಿದ ಮೇಲೆ, ದೇವ ದೇವನಾದ ಪ್ರಸನ್ನ ವೆಂಕಟನಿಗೆ ಅರ್ಪಿಸಿ ನಾನು, ನನ್ನದು ಎಂಬುವ ಮಮಕಾರವನ್ನು ಬಿಟ್ಟು ಸತತವಾಗಿ ಸಂಸಾರವನ್ನು ಹೊಗಳದೆ, ನಿರಂತರವಾಗಿ ಅಚ್ಯುತನ ಪಾದಗಳನ್ನು ಮಾತ್ರ ನೋಡು ಎನ್ನುತ್ತಾರೆ.

ಸುಂದರವಾದ ದೃಷ್ಟಾಂತಗಳು. ಸ್ಪಷ್ಟವಾದ ಭಾಷೆಯಲ್ಲಿ ಎಲ್ಲರಿಗೂ ತಿಳಿವಂತೆ, ಈ ಮನಸ್ಸು ಎಷ್ಟೊಂದು ಕಿಡಿಗೇಡಿಯಾಗಿದೆ ಎಂದು ಹೇಳುವುದರ ಜೊತೆಗೆ ನಿಜವಾದ ಯಶಸ್ಸು ಎಂದರೆ ಪರಮಾತ್ಮನ ಪಾದಕಮಲಗಳನ್ನು ಆಶ್ರಯಿಸುವುದು ಎಂದು ಹೇಳುತ್ತಾರೆ. ಎಲ್ಲವನ್ನೂ ಪರಮಾತ್ಮನಿಗೆ ಅರ್ಪಿಸಿಬಿಡು ಎನ್ನುತ್ತಾರೆ.

ತಮ್ಮ ಇನ್ನೊಂದು ಕೀರ್ತನೆಯಲ್ಲಿ ಇನ್ನಷ್ಟು ಸ್ಪಷ್ಟವಾಗಿ ತಮ್ಮ ಮನಸ್ಸಿಗೆ ನಿಜದ ಸಂಗತಿಯನ್ನು ತಿಳಿಸಿದ್ದು ವಿಶೇಷವಾಗಿದೆ.

**'ಹೇ ಮನವೆ ಈ ದೇಹ ಗಾಳಿ ದೀಪ'**

ಎಂಬ ಪಲ್ಲವಿಯ ಚಿಕ್ಕ ಕೀರ್ತನೆಯಲ್ಲಿ ಪಲ್ಲವಿಯಲ್ಲೇ ಈ ದೇಹದ ಸ್ಪಷ್ಟ ಚಿತ್ರಣವನ್ನು ಕೊಡುತ್ತಾರೆ. ಈ ದೇಹವೆಂಬುದು ಗಾಳಿಗಿಟ್ಟ ದೀಪ,

ಯಾವಾಗ ಶಾಂತವಾಗುತ್ತದೆಯೋ ಗೊತ್ತಿಲ್ಲ ಎಂದು ಹೇಳುತ್ತ ಮುಂದಿನ ನುಡಿಯಲ್ಲಿ ಈ ಹಿಂದಿನವರು ಮಾಡಿದ್ದನ್ನು ಸ್ಮರಿಸುತ್ತಾರೆ.

**'ನಳ ಪುರೂರವ ಹರಿಶ್ಚಂದ್ರ ಪುಣ್ಯಶ್ಲೋಕರು**
**ಇಳೆಯೊಳು ಒಯ್ಯಲಿಲ್ಲ ದಾರೂ'**

ಹರಿಶ್ಚಂದ್ರ, ನಳ, ಪುರೂರವರೇ ಮೊದಲಾದ ಎಂತೆಂಥ ಪುಣ್ಯವಂತರು ಈ ಭೂಮಿಯಲ್ಲಿ ಆಗಿ ಹೋಗಿದ್ದಾರೆ. ಅವರು ಯಾರೂ ಹೋಗುವಾಗ ಎನನ್ನೂ ಒಯ್ಯಲಿಲ್ಲ. ಆದ್ದರಿಂದ,

**'ಹಂಬಲಗಡಲೊಳು ಮುಳುಗಲಿನ್ನಾವ ಸುಖ**
**ಅಂಬುಜಾಕ್ಷಗೆ ಸಲ್ಲಲೀ ಲೆಕ್ಕ'**

ಈ ಸಂಸಾರವೆಂಬ ಸಾಗರದಲ್ಲಿ ಯಾವಾಗಲೂ ಏನಾದರೊಂದು ಹಂಬಲಿಸುತ್ತ ಮುಳುಗುತ್ತಲೇ ಇರುತ್ತೇವೆ. ಅದರಿಂದ ಏನೂ ಸುಖವಿಲ್ಲ ಎಂಬ ಲೆಕ್ಕವೂ ಅಂಬುಜಾಕ್ಷನಾದ ಶ್ರೀ ಹರಿಗೆ ಗೊತ್ತು. ಆದರೂ ಆಶೆ ಬಿಡಲೊಲ್ಲದು.

**'ಧರ್ಮವ ಹಳಿದು ಸತ್ಕರ್ಮವ ಜರೆದರೆ**
**ನಮ್ಮ ಪ್ರಸನ್ನವೆಂಕಟ ದೂರ'**

ಎಂಬುದಾಗಿ ಕೊನೆಯಲ್ಲಿ ಮಂಗಳ ಹಾಡಿದ್ದಾರೆ. ಆಶೆಯಲ್ಲೇ ಬಿದ್ದು, ಧರ್ಮವನ್ನು ಹಳಿದು, ಸತ್ಕರ್ಮಗಳನ್ನು ಜರೆಯುತ್ತ ಹೋದರೆ ನಮ್ಮ ಪ್ರಸನ್ನವೆಂಕಟನೆಂಬ ಭಗವಂತ ದೂರನಾಗುತ್ತಲೇ ಹೋಗುತ್ತಾನೆ. ಆದ್ದರಿಂದ ಹೇ ಮನವೇ ಇದನ್ನು ತಿಳಿದು ನಡಿಯಬೇಕು ಎಂದು ತಮ್ಮ ಮನಸ್ಸಿಗೆ ಹೇಳಿದ್ದಾರೆ.

ಹಾಗಾದರೆ ಏನು ಮಾಡಬೇಕು ? ಅದನ್ನೂ ಕೀರ್ತನೆಯೊಂದರಲ್ಲಿ ಮನ ತಟ್ಟುವಂತೆ ದಾಸರು ಮನಸ್ಸಿಗೆ ಹೇಳಿದ್ದಾರೆ.

**‘ಮನವೆ ಮಾಧವನ ಮರೆದುದರಿಂದ**
**ದಣುವಾಯಿತು ಹಿಂದೆ**
**ಕ್ಷಣವೊಂದು ಬಿಡದಿರು ಕೃಷ್ಣನ ಮುಂದೆ’**

ಎಂದು ಪ್ರಾರಂಭವಾಗುವ ಕೀರ್ತನೆಯಲ್ಲಿ, ಪ್ರತಿಯೊಂದು ನುಡಿಗಳ ಮೊದಲ ಸಾಲುಗಳಲ್ಲೆ ಭಗವಂತನ ದರ್ಶನ ಪಡೆಯುವ ಮೆಟ್ಟಿಲುಗಳನ್ನು ಹೇಳಿದ್ದಾರೆ.

**‘ಹರಿವಾರ್ತೆಯನ್ನು ಕೇಳು ಕೇಳಿದ್ದೇ ಕೇಳು’**
**‘ಹರಿಗುರುವಿಗೆರಗು ಅರಿತರಿತೆರಗು’**
**‘ಹರಿ ವಿಗ್ರಹ ನೋಡು ನೋಡಿದ್ದೇ ನೋಡು**
**ಮಮಕಾರವೀಡಾಡು’**
**‘ಹರಿಪ್ರಸಾದವನುಣ್ಣು ನೆನೆನೆನೆದುಣ್ಣು ಶ್ರೀ ಹರಿಪ್ರೀತ್ಯೈನ್ನು’**

ಇವುಗಳು ಮೊದಲಿನ ನಾಲ್ಕು ನುಡಿಗಳ ಮೊದಲ ಸಾಲುಗಳು. ಇವುಗಳಲ್ಲಿ ಸಾಧಕನು ಮಾಡಬೇಕಾದ ಎಲ್ಲವನ್ನೂ ಸಾರರೂಪದಲ್ಲಿ ಹೇಳಿದ್ದಾರೆ. ಹರಿಯ ವಾರ್ತೆಯನ್ನು ಕೇಳಿದ್ದೇ ಕೇಳುವುದು ಶ್ರವಣವೆನಿಸುತ್ತದೆ. ಅದು ಸಾಧಕನಿಗೆ ಬಹು ಮುಖ್ಯವಾದದ್ದು. ಅನಂತರ, ಹರಿಗುರುವಿಗೆರಗು, ಅರಿತರಿತೆರಗು. ಶ್ರೀ ಮಧ್ವಾಚಾರ್ಯರು ಈ ಹಿಂದೆ ಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳಿದ ಮಾತು,

**‘ಮಾಹಾತ್ಮ್ಯ ಜ್ಞಾನಪೂರ್ವಸ್ತು ಸುದೃಢಃ ಸರ್ವೋತೋಧಿಕಃ**
**ಸ್ನೇಹೋ ಭಕ್ತಿರಿತಿ ಪ್ರೋಕ್ತಃ ತಯಾ ಮುಕ್ತಿರ್ನಚಾನ್ಯಥಾ’**

ಹರಿಗುರುವಿಗೆರಗು, ಅರಿತರಿತೆರಗು ಎಂದು ಹೇಳುವಲ್ಲಿ ಶ್ರೀ ಮಧ್ವಾಚಾರ್ಯರ ಮೇಲಿನ ಶ್ಲೋಕವನ್ನೆ ದಾಸರು ಸರಳ ಕನ್ನಡದಲ್ಲಿ ಹೇಳಿದರೆಂದಷ್ಟೆ ಹೇಳಿದರೆ ಅದು ತಪ್ಪಾಗುತ್ತದೆ. ಅದನ್ನು ದಾಸರು ಅನುಭವಿಸಿ ಹೇಳಿದ್ದರಿಂದ ಅಷ್ಟು ಸುಂದರವಾಗಿ ಸರಳವಾಗಿ ಹೇಳಲು ಸಾಧ್ಯವಾಗಿದೆ. ಸರ್ವೋತ್ತಮನಾದ

ಹರಿಯನ್ನು, ಜೀವೋತ್ತಮರಾದ ಗುರುಗಳಾದ ಶ್ರೀ ಮಧ್ವಾಚಾರ್ಯರ ಮಹಾತ್ಮ್ಯಗಳನ್ನು ತಿಳಿದುಕೊಂಡು ಎರಗುವುದು ಭಕ್ತಿ. ಅದು, ಮಹಾತ್ಮ್ಯೆ ಜ್ಞಾನ ಪೂರ್ವಕವಾಗಿದ್ದರೆ ಅದುವೆ ಸ್ನೇಹ, ಭಕ್ತಿ. ಅದು ಎಲ್ಲದರಲ್ಲಿ ಶ್ರೇಷ್ಠವಾದುದೆಂದು ಶ್ರೀ ಮಧ್ವಾಚಾರ್ಯರು ಹೇಳಿದ್ದಾರೆ. ಇಲ್ಲಿಯ ಜ್ಞಾನವೆಂದರೆ 'ಹರಿಯು ಬಿಂಬನು ಮತ್ತು ಜೀವನು ಆತನ ಪ್ರತಿ ಬಿಂಬನು. ಅದನ್ನು ಅರಿತುಕೊಳ್ಳುವುದೆಂದರೆ ಬಿಂಬೋಪಾಸನೆ'. ಅದರಿಂದ ಉಂಟಾಗುವುದೇ ಭಕ್ತಿ, ಅದುವೆ ಬಿಂಬಾಪರೋಕ್ಷ. ಅದನ್ನು ಪ್ರಸನ್ನವೆಂಕಟದಾಸರು ಎರಡೇ ಎರಡು ಶಬ್ದಗಳಲ್ಲಿ ಹೇಳಿದರು. ಅದು ಅವರ ಸಾಹಿತ್ಯದ ವೈಶಿಷ್ಟ್ಯವೂ ಆಗಿದೆ.

ಇದಕ್ಕೆ ಪೂರಕವಾಗಿ, ಬಿಂಬೋಪಾಸನೆಗೆ ಅನುಕೂಲವಾಗುವಂತೆ ಮುಂದಿನ ಸಾಲಿನಲ್ಲಿ, 'ಹರಿ ವಿಗ್ರಹ ನೋಡು ನೋಡಿದ್ದೇ ನೋಡು, ಮಮಕಾರವೀಡಾಡು' ಎಂಥ ಸುಂದರ ಮಾತು! ಏಕಾಗ್ರ ಚಿತ್ತವನ್ನು ಸಾಧಿಸಲು ಶ್ರೀ ಹರಿಯ ವಿಗ್ರಹವನ್ನೇ ನೋಡು. ಮತ್ತೆ ನೊಡು. ನೋಡಿದ್ದನ್ನೇ ನೋಡು. ಅದು ಎಡೆ ಬಿಡದ ಚಿಂತನೆ. ಅದು ಅಹಂಕಾರವನ್ನು ಬಿಡದೆ ಸಾಧಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆಂದೆ ಮಮಕಾರವೀಡಾಡು ಎಂದರು. 'ಅಖಂಡೋ ಧ್ಯಾನಮುಚ್ಯತೇ'. ಇದು ನಿರಂತರವಾದ ಬಿಂಬೋಪಾಸನೆ. ಇನ್ನು ಮುಂದಿನ ಸಾಲಿನಲ್ಲಿ 'ಹರಿಪ್ರಸಾದವನುಣ್ಣು ನೆನೆನೆನೆದುಣ್ಣು ಶ್ರೀ ಹರಿ ಪ್ರೀತ್ಯೆನ್ನು' ಎಂಬುವಲ್ಲಿ ಭವದಲ್ಲಿ ಬಂದುದೆಲ್ಲವು ಹರಿಯ ಪ್ರಸಾದ ಮತ್ತು ಅವನಿಗೆ ಪ್ರೀತಿಯಾದದ್ದು ಎಂಬ ಕಲ್ಪನೆ. ಸುಖವಿರಲಿ, ದುಃಖವಿರಲಿ ಅದನ್ನು ಸಂತೋಷದಿಂದ ಸ್ವೀಕರಿಸು ಎನ್ನುತ್ತ ಕೊನೆಯ ನುಡಿಯಲ್ಲಿ ದಾಸರು ಹೇಳಿದ್ದು ಇವೆಲ್ಲವುಗಳ ಪರಾಕಾಷ್ಠೆ ಎನಿಸುತ್ತದೆ.

**'ಹರಿಯಂಘ್ರಿ ಪರಾಗವ ಗ್ರಹಿಸಾಘ್ರಾಣಿಸು ಹರಿಯವರಿಗೆ ಉಣಿಸು**
**ಹರಿಭಕ್ತಿ ಜ್ಞಾನ ವೈರಾಗ್ಯವ ಗಳಿಸು**
**ಹರಿಪ್ರಿಯ ಪ್ರಭು ಮಧ್ವಾಚಾರ್ಯರ ಪ್ರಿಯ ಮೇ**
**ಲ್ಗರಿ ಪ್ರಸನ್ವೆಂಕಟ ದೊರೆಯನೆ ನಂಬು'**

ಹರಿಪಾದಕಮಲಗಳ ಪರಾಗವನ್ನು ಗ್ರಹಿಸಿ ಆಘ್ರಾಣಿಸು. ನೀನು ಆಘ್ರಾಣಿಸಿದ್ದನ್ನು ಹರಿಯವರಿಗೆ ಉಣಿಸು. ನೀನೊಬ್ಬನೇ ಆಘ್ರಾಣಿಸಿ ಕುಳಿತುಕೊಳ್ಳಬೇಡ, ಹರಿಯವರಿಗೆ, ಹರಿಯನ್ನು ನಂಬಿದವರಿಗೆ, ಹರಿದಾಸರಿಗೆ ಅದನ್ನು ಉಣಿಸು. ಅದರಿಂದ ಹರಿಭಕ್ತಿ, ಜ್ಞಾನ ಮತ್ತು ವೈರಾಗ್ಯಗಳನ್ನು ಗಳಿಸು. ನಿರಂತರವಾಗಿ ಹರಿಗೆ ಪ್ರಿಯನಾದ, ನಮ್ಮಗಳೆಲ್ಲರ ಒಡೆಯನಾದ ಶ್ರೀ ಮಧ್ವಾಚಾರ್ಯರ ಅತ್ಯಂತ ಪ್ರಿಯನಾದ ಮೇಲ್ಗಿರಿಯ ಪ್ರಸನ್ವೆಂಕಟ ದೊರೆಯನ್ನೇ ನಂಬು ಎಂದು ಹೇಳುತ್ತ, ಮನವೇ ಮಾಧವನ ಮರೆಯದಿರು ಎಂದರು ಪ್ರಸನ್ನ ವೆಂಕಟದಾಸರು. ಆದದ್ದು ಆಗಿ ಹೋಗಿದೆ ಅದರಿಂದ ಬೇಕಾದಷ್ಟು ದಣಿವಾಗಿದೆ. ಈಗ ಮಾತ್ರ ಒಂದು ಕ್ಷಣವನ್ನೂ ಬಿಡದೆ ಮಾಧವನನ್ನು ನೆನೆ ಎಂದರು.

ಮನಸ್ಸಿನ ಚಂಚಲತೆಯ ಕುರಿತು ಮತ್ತು ಅದನ್ನು ಏಕಾಗ್ರ ಚಿತ್ತದತ್ತ ಒಯ್ಯಲು ಪ್ರಸನ್ನ ವೆಂಕಟದಾಸರು ಇನ್ನೂ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಪ್ರತಿಯೊಬ್ಬ ಸಾಧಕನಿಗೂ ಮುಂದಿನ ಸಾಧನೆಯನ್ನು ಮಾಡಬೇಕಾದರೆ ಮನಸ್ಸನ್ನು ಗಟ್ಟಿಗೊಳಿಸುವುದು ಅವಶ್ಯವಾಗಿದೆ. ಒಂದು ಹಂತದಲ್ಲಿ ಈ ಮನಸ್ಸಿನ ಚಂಚಲತೆಯಿಂದ ಘಾಸಿಗೊಂಡ ದಾಸರು,

**'ಬೆದರದಿರೆಲೆ ಆತ್ಮ**
**ಮಧುಸೂದನನ ಕೃಪೆ ಹೊಂದು ದುಷ್ಕೃತಕೆ**
**ಬೆದರದಿರೆಲೆ ಆತ್ಮ'**

ಎಂಬುದಾಗಿ ಆತ್ಮಕ್ಕೆ ಸಮಾಧಾನವನ್ನು ಹೇಳಿದ್ದಾರೆ. ಬಹುಶಃ ಅದಕ್ಕೆಯೇ ಇದ್ದೀತು,

**'ಸಂಗವಿಡಿಸು ರಂಗಾ ವಿಭುದರ**
**ಹಿಂಗದೆ ನಾಮ ಪಾಡ್ವ ಭಕುತರ'**

ಎನ್ನುತ್ತಾರೆ. ಭಗವಂತನ ಸಾನ್ನಿಧ್ಯವನ್ನು ಪಡೆಯುವಲ್ಲಿ ಸತ್ಸಂಗದ ಮಹತ್ವ ಅಧಿಕವಾದದ್ದು. ಯಾವುದೇ ಸಿದ್ಧಾಂತದ ಸಾಧನೆಯಲ್ಲೂ ಸತ್ಸಂಗದ

ಪಾತ್ರ ಹಿರಿದಾದದ್ದು. ಅದನ್ನು ಪ್ರಸನ್ನವೆಂಕಟದಾಸರು ತಮ್ಮ ಹಲವಾರು ಕೀರ್ತನೆಗಳಲ್ಲಿ ಪ್ರತಿಪಾದಿಸಿದ್ದಾರೆ. 5 ನುಡಿಗಳ ಪ್ರಸಕ್ತ ಕೀರ್ತನೆಯಲ್ಲಿ, ಕೊನೆಯ ನುಡಿಯಲ್ಲಿ,

**'ಅರಿಸಖರೊಳು ಸಮವೆರಸಿ ನೋಡುತ ಹರಿ**
**ಯರಿಸಿದೊಲಂಗೀಕರಿಸಿ ನಿರಂತರ**
**ಪರಸನ್ನ ವೆಂಕಟಗಿರೀಶ ನಾಮಾಸ್ತ್ರವ**
**ಧರಿಸಿ ಸಂಸಾರವ ಉತ್ತರಿಸುವರ'**

ಎಂದರು. ನಿರಂತರವಾಗಿ ಪ್ರಸನ್ನವೆಂಕಟ ಗಿರೀಶನ ನಾಮ ಅಸ್ತ್ರವನ್ನು ಧರಿಸಿದವರಿಗೆ ಸಂಸಾರದ ಚಿಂತೆ ಇರುವುದಿಲ್ಲ. ಅದಕ್ಕೆಂದೇ ಅವರು ತಮ್ಮ ಮತ್ತೊಂದು ಕೀರ್ತನೆಯಲ್ಲಿ,

**'ಬಿಡೆನೊ ನಿನ್ನಂಘ್ರಿ ಶ್ರೀನಿವಾಸ ನನ್ನ**
**ದುಡಿಸಿಕೊಳ್ಳೆಲೊ ಶ್ರೀನಿವಾಸ**
**ನಿನ್ನುಡಿಯ ಜೀತಲ್ಲೊ ಶ್ರೀನಿವಾಸ ನನ್ನ**
**ನಡೆ ತಪ್ಪು ಕಾಯೋ ಶ್ರೀನಿವಾಸ,**

ಎಂದು ಪ್ರಾರಂಭವಾಗುವ ಜನಪ್ರಿಯ ಸುದೀರ್ಘ ಕೃತಿಯಲ್ಲಿ ಶ್ರೀನಿವಾಸನನ್ನೆ ಮೊರೆ ಹೊಕ್ಕಿದ್ದಾರೆ. ಸಾಧಕನಿಗೆ ಭಗವಂತನಲ್ಲಿ ಮೊರೆ ಇಡುವ ಅತ್ಯಂತ ಪ್ರಶಸ್ತವಾದ ಕೀರ್ತನೆ ಇದಾಗಿದೆ.

**'ಬಡಿಯೊ ಬೆನ್ನಲಿ ಶ್ರೀನಿವಾಸ ನ**
**ನ್ನೊಡಲ ಹೊಯ್ಯದಿರೊ ಶ್ರೀನಿವಾಸ ನಾ**
**ಬಡವ ಕಾಣೆಲೊ ಶ್ರೀನಿವಾಸ ನಿ**
**ನ್ನೊಡಲ ಹೊಕ್ಕೆನೊ ಶ್ರೀನಿವಾಸ'**

ಎನ್ನುವಾಗ ಭಗವಂತನಲ್ಲಿ ತಮ್ಮನ್ನು ತಾವೇ ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾರೆ. ಹೀಗೆ ಸಮರ್ಪಿಸದ ಹೊರತು ಭಗವಂತನೂ

ಸಾಧಕನ ಕುರಿತು ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ ಎಂಬುವುದು ಶಾಸ್ತ್ರಗಳನ್ನು ಬಲ್ಲ ಎಲ್ಲರಿಗೂ ವಿದಿತವಾದದ್ದಿದೆ. 9 ನುಡಿಗಳ ಕೀರ್ತನೆಯಲ್ಲಿ ಶ್ರೀನಿವಾಸನ ಊಳಿಗ ಮಾಡುವ ಅನೇಕ ಸುಂದರ ದೃಷ್ಟಾಂತಗಳನ್ನು ದಾಸರು ಕೊಟಿದ್ದಾರೆ. ಅಲ್ಲಿಯ ಅವರ ಸರಳ ನಿರೂಪಣೆ ಹಾಗೂ ಭಗವಂತನೊಂದಿಗಿದ್ದ ಆತ್ಮೀಯ ಸಂಬಂಧದಿಂದ ಇಂದು ದಾಸರ ಈ ಕೀರ್ತನೆ ಪ್ರತಿಯೊಬ್ಬರ ಬಾಯಲ್ಲಿದೆ. ಹಾಗೆ ಶ್ರೀನಿವಾಸನಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡಮೇಲೆ ಆತನನ್ನು ತಮ್ಮ ಹತ್ತಿರ ಕರೆಯುವ ಹಕ್ಕು ಹುಟ್ಟುತ್ತದೆ. ಅಂತೆಯೇ ದಾಸರು ತಮ್ಮ ಒಂದು ಕೀರ್ತನೆಯಲ್ಲಿ,

**'ದೇವ ಬಾರೋ ಶ್ರೀನಿವಾಸ ದೇವನೆ ಬಾರೋ ನನ್ನ**
**ದಾವ ದಾವ ಪರಿಯ ತಪ್ಪ ಕಾವನೆ ಬಾರೋ'**

ಎಂದು ಆತನನ್ನು ಕರೆದಿದ್ದಾರೆ. ಇದೀಗ ಅವರಿಗೆ ಬಿಂಬನ ಸಾಕ್ಷಾತ್ಕಾರದ ಚಿನ್ಹೆಗಳು ತೋರಿವೆ. ಅಂತಲೇ ಅಷ್ಟು ಧೈರ್ಯದಿಂದ ಬಾ ಎಂದು ಕರೆಯಲು ಸಾಧ್ಯವಾಗಿದೆ. 7 ನುಡಿಗಳ ಕೀರ್ತನೆಯಲ್ಲಿ ಒಂದೆಡೆ,

**'ಜೀವನ ಪಾವನ ಮಾಡುವನೆ ಬಾರೋ ನನ್ನ**
**ಭಾವದ ಬಯಕೆ ಪೂರೈಸುವವನೆ ಬಾರೊ'**
ಎಂದು ಹೇಳಿದ್ದರೆ ಮತ್ತೊದೆಡೆ ಅಲ್ಲಿಯೆ,
**'ಧ್ಯಾನಿಸಲೊಮ್ಮ್ಯೆರೆ ದಯದಿ ನೀ ನಿಲ್ಲ ಬಾರೊ ಅ**
**ಜ್ಞಾನ ನಾಶ ಮಾಡುವ ಕೃಪಾನಿಧಿ ಬಾರೊ'**

ಎನ್ನುವಾಗ, ಈ ಎಲ್ಲ ಅವರ ಭಾವನೆಗಳು ಬಿಂಬ ರೂಪಿಯಾದ ಪರಮಾತ್ಮನ ಕುರಿತಾಗಿವೆ. ಭಾವದ ಬಯಕೆ ಮುಕ್ತಿಯ ಬಯಕೆ, ಅದರಿಂದ ಜೀವನ ಪಾವನ, ನಿರಂತರ ಧ್ಯಾನದಲ್ಲಿದ್ದಾಗ ಅಜ್ಞಾನ ನಾಶವಾಗುವುದೆಂದರೆ, ಬಿಂಬನ ಜ್ಞಾನ ವಾಗುವುದು. ಆ ಹಂತಕ್ಕೆ ದಾಸರು ಬಂದು ತಲುಪಿದ್ದಾರೆ ಎಂದೇ ಅರ್ಥ. ಕೊನೆಯ ನುಡಿಯಲ್ಲಿ ಅದನ್ನು ಇನ್ನಷ್ಟು ಸ್ಪಷ್ಟ ಪಡಿಸುತ್ತಾರೆ.

**'ಶ್ರೀರಮಣ ಎಂದಿಗಾಪ್ತರಾರಿಲ್ಲೊ ಬಾರೋ ಸುಖ**
**ತೀರಥೇಶ ಪ್ರಸನ್ವೆಂಕಟರಾಯ ಬಾರೋ'**

ನನಗೆ ಯಾರೂ ಆಪ್ತರಿಲ್ಲ ಎನ್ನುತ್ತ ಸುಖತೀರಥೇಶ ಪ್ರಸನ್ನವೆಂಕಟ ಬಾರೊ ಎಂದು ಕರೆದಿದ್ದಾರೆ. ಇಲ್ಲಿಯ ಸುಖತೀರ್ಥರು ಶ್ರೀ ಮಧ್ವಾಚಾರ್ಯರು, ಪ್ರಾಣದೇವರಲ್ಲದೆ ಬೇರೆ ಯಾರೂ ಅಲ್ಲ. ಸರ್ವೋತ್ತಮನಾದ ಹರಿಯ ಸಾಕ್ಷಾತ್ಕಾರಕ್ಕೆ ಜೀವೋತ್ತಮರಾದ ವಾಯುದೇವರ ಸೇತುವೆ ಬೇಕು. ಅದು ಸಾಧಕನ ಅತ್ಯುನ್ನತ ಹಂತ. ಇನ್ನು ಉಳಿದದ್ದು ಆತನ ಸಾಕ್ಷಾತ್ಕಾರ ಅಷ್ಟೆ. ಮತ್ತೆ ಮತ್ತೆ ಅವನ ಶರಣು ಹೋಗುತ್ತಾರೆ.

**'ಸುರಮುನಿಜನನುತ ಪಾದ ನಿನ್ನ**
**ಶರಣು ಪೊಕ್ಕೆನೊ ಗೋವಿಂದ ನೀ**
**ಚರ ಕೈಯಲಿ ಕೊಡದಿರೊ ಎನ್ನ ಮೇ**
**ಲ್ಗಿರಿ ಶ್ರೀನಿವಾಸ ಪಾವನ್ನ'** ಎಂಬ ಕೀರ್ತನೆಯ ಕೊನೆಯಲ್ಲಿ,

**'ಅರಿಯನರಿಯೆ ಅನ್ಯ ಮರೆಯೆ ನಿನ್ನ**
**ಸ್ಮರಣೆಗೆಚ್ಚರವಿತ್ತು ಹೊರೆಯೊ**
**ಸಿರಿಗುರು ಆನಂದಮುನಿ ದೊರೆಯೆ ನಿತ್ಯ**
**ಪರಸನ್ನ ವೆಂಕಟ ಭಕ್ತರ ಸಿರಿಯೆ'**

ನನಗೆ ಇನ್ನೊಂದು ಗೊತ್ತಿಲ್ಲ ಎಂದು ಹೇಳುತ್ತ, ಸಿರಿ ಗುರು ಆನಂದಮುನಿಯ ದೊರೆಯೆಂದು ಅವನನ್ನು ಶರಣು ಹೋಗುತ್ತಾರೆ. ಇನ್ನೊಂದು ಕೀರ್ತನೆಯಲ್ಲಿ,

**'ಹರಿ ಶರಣು ಮಧ್ವಗುರು ಶರಣೆಂಬೋದೆ ಬೀಜ ಮಂತ್ರ ಇಹ**
**ಪರಕಿದೆ ಸಾಧನವೆಂದು, ನಂಬಿ ಬಿಟ್ಟ ಹಲವು ತಂತ್ರ'**

ಎಂಬುವಲ್ಲಿ, ಇಹ ಪರಕ್ಕೆ ಸಾಧನದ ಬೀಜ ಮಂತ್ರವೆಂದರೆ ಸರ್ವೋತ್ತಮನಾದ ಹರಿಗೆ ಮತ್ತು ಜೀವೋತ್ತಮರಾದ ವಾಯುದೇವರಿಗೆ

ಶರಣು ಹೋಗುವುದು, ಆದರೆ ಹಲವು ತಂತ್ರಗಳನ್ನು ನಂಬಿ ಕೆಡುತ್ತಾರೆ ಎಂದು ಹೇಳುತ್ತ ಮುಂದಿನ 5 ನುಡಿಗಳಲ್ಲಿ ಅವನ ಹೊರತು ಇನ್ನಾರೂ ಕಾಯಲಾರರು ಎಂಬುದನ್ನು ದೃಷ್ಟಾಂತಗಳ ಮೂಲಕ ಹೇಳಿದ್ದಾರೆ.

ಹರಿದಾಸರ ಸಾಧನೆಗೆ ಶ್ರೀ ಮಧ್ವಾಚಾರ್ಯರ ಸಿದ್ಧಾಂತ ಬುನಾದಿ ಎಂಬುದು ನಿಜ. ಅದಕ್ಕೆ ಅನುಗುಣವಾಗಿಯೇ ಹರಿದಾಸರ ತಾತ್ವಿಕ ಕೀರ್ತನೆಗಳು ರಚಿತವಾಗಿವೆ ಎಂಬುದೂ ನಿಜ. ಯತಿಗಳು ಮೊದಲು ಮಾಡಿಕೊಂಡು ಉಳಿದೆಲ್ಲ ಹರಿದಾಸರೂ ಸಾಧನಕ್ಕೆ ಮೂಲಕಾರಣರಾದ ಶ್ರೀ ಮಧ್ವಾಚಾರ್ಯರನ್ನು, ಪ್ರಾಣದೇವರನ್ನು ಪ್ರತ್ಯೇಕವಾಗಿ ಸ್ತುತಿಸುತ್ತಾರೆ. ಆದರೆ ಪ್ರಸನ್ನವೆಂಕಟದಾಸರು ಸರ್ವೋತ್ತಮನಾದ ಹರಿಯೊಂದಿಗೆ ಜೀವೋತ್ತಮರಾದ ವಾಯುದೇವರ ಅವತಾರರೇ ಆದ ಶ್ರೀ ಮಧ್ವಾಚಾರ್ಯರನ್ನು ಸೇರಿಸಿ ಸ್ಮರಿಸಿದ್ದು ವೈಶಿಷ್ಟ್ಯ ಅದಕ್ಕೆ ಕಾರಣವಿಲ್ಲದಿಲ್ಲ.

'ಭಕ್ತಿಯನ್ನು ಮಾಡಬೇಕಾದವನು ಜೀವ: ಭಕ್ತಿಗೆ ಗುರಿಯಾಗುವವನು ಹರಿ. ಜೀವನು ಅಣು, ನಿತ್ಯ, ಸ್ವಪ್ರಕಾಶ. ಕುದುರೆಯ ಬಾಲದ ಒಂದು ಕೂದಲನ್ನು ನೇರವಾಗಿ ಒಂದು ಸಾವಿರ ಸೀಳುಗಳಾಗಿ ವಿಭಾಗ ಮಾಡುವುದಾದರೆ, ಒಂದು ಸೀಳು ಜೀವನ ಸ್ವರೂಪ ಪರಿಮಿತಿ. ಈ ಜೀವನ ಹೃದಯಕಮಲದಲ್ಲಿ ಹರಿಯು ಮೂರು ತೆರನಾಗಿ ಇದ್ದಾನೆ. ಹೃದಯಕಮಲದ ಕರ್ಣಿಕೆಯ ತುದಿಯಲ್ಲಿ, ಸಾಧಕನ ಹೆಬ್ಬೆರಳು ಗೆಣ್ಣಿನ ಪ್ರಮಾಣದಲ್ಲಿ 'ಅಗ್ರೇಶ' ಇವನನ್ನು ಪ್ರಾಜ್ಞರೂಪನೆಂದೂ ಕರೆಯುತ್ತಾರೆ. ಜೀವರ ನಿದ್ರೆಗೆ ಇವನೇ ಕಾರಣ. ಹೃದಯಾಕಾಶದಲ್ಲಿ ಎಲ್ಲೆಲ್ಲೂ ವ್ಯಾಪಿಸಿಕೊಂಡು ಪ್ರಾದೇಶ ಪರಿಮಿತನಾಗಿ [ಎಂದರೆ ಹೃದಯಾಕಾಶವೆಷ್ಟಿದೆಯೋ ಅಷ್ಟು ಪ್ರದೇಶವನ್ನು ತುಂಬಿ] 'ಪೂರ್ಣ' ಹೃದಯಕಮಲದ ಬುಡದಲ್ಲಿ ಹೆಬ್ಬೆರಳ ತುದಿಯಷ್ಟು ಪರಿಮಿತಿಯುಳ್ಳ 'ಮೂಲೇಶ'. ಇವನನ್ನು ವಿಜ್ಞಾನಾತ್ಮನೆಂದೂ ಕರೆಯುತ್ತಾರೆ. ಈ ಮೂಲೇಶನ ಪಾದವನ್ನಾಶ್ರಯಿಸಿ ಮುಖ್ಯಪ್ರಾಣನು [ವಾಯುದೇವರು, ಹನುಮಂತ, ಶ್ರೀ ಮಧ್ವಾಚಾರ್ಯರು], ಶ್ವಾಸರೂಪನಾಗಿರುವ ಮುಖ್ಯಪ್ರಾಣನು

ಹಂಸ ಮಂತ್ರವನ್ನು ಎಡೆಬಿಡದೆ ಜಪಿಸುತ್ತ ಇರುವನು; ಮತ್ತು ಇದೇ ಜಪವನ್ನು ಜೀವನಿಂದಲೂ ಮಾಡಿಸುತ್ತ ಇರುವನು. ಇದೇ ಹಂಸಜಪ ಪ್ರತಿಯೊಬ್ಬನೂ ದಿನಕ್ಕೆ ಇಪ್ಪತ್ತೊಂದುಸಾವಿರ ಆರುನೂರು ಸಂಖ್ಯೆಯ ಹಂಸಜಪವನ್ನು ಮಾಡುತ್ತಾನೆ. ಇದನ್ನು ಅವನಿಂದ ಮಾಡಿಸುವ ಮುಖ್ಯಪ್ರಾಣನು ಹರಿಪ್ರೀತಿಗಾಗಿಯೇ ಮಾಡಿಸುತ್ತಾನೆ.'

ಪ್ರಸನ್ನವೆಂಕಟದಾಸರು ಕೂಡ ತಮ್ಮ 'ಅರ್ಚನೆ ಮಾಡಿರಯ್ಯ ಶ್ರೀ ಭಗವದರ್ಚನೆ ಮಾಡಿರಯ್ಯ' ಎಂಬ 13 ನುಡಿಗಳ ಸುದೀರ್ಘ ಕೀರ್ತನೆಯಲ್ಲಿ ಒಂದೆಡೆ ಹೀಗೆ ಹೇಳುತ್ತಾರೆ.

**'ಆತ್ಮ ಕರ್ತೃತ್ವ ನೀಗಿ ಸರ್ವಾಂತರಾತ್ಮ ಪರಮಾತ್ಮನೆಂದು**
**ಆತ್ಮ ಮತ್ತೆ ಜ್ಞಾನಾತ್ಮ ಪ್ರೇರಕ ಪ್ರೇ । ರ್ಯಾಪ್ತ ನಿವೇದನ ಭಕ್ತಿ**
**ನವಕಗಳಿಂದ ॥ ೧೧ ॥**

**ಸರ್ವೇಂದ್ರಿಯ ಮನಸ್ಥ ಮುಖ್ಯಪ್ರಾಣನೋರ್ವ ನಿಯಂತ್ರ ಹರಿ।**
**ಸರ್ವಪ್ರೇರಕನೆಂಬೋ ವಿಜ್ಞಾನ ಮಾರ್ಗದಿ । ಸರ್ವಕಾಲದಲಿ**
**ಸರ್ವ ಸಮರ್ಪಣೆಯೆಂದು ॥ ೧೨ ॥**

ಆದ್ದರಿಂದ ಹರಿಯ ಕರುಣೆಯನ್ನು ಪಡೆಯಲು ಮುಖ್ಯಪ್ರಾಣನು ಅತಿ ಅವಶ್ಯ. ಅದಕ್ಕಾಗಿ ಪ್ರಸನ್ನವೆಂಕಟದಾಸರು ತಮ್ಮ ಹಲವಾರು ಕೀರ್ತನೆಗಳಲ್ಲಿ, 'ಸುಖತೀರಥೇಶ ಪ್ರಸನ್ನವೆಂಕಟರಾಯ' 'ಹರಿಪ್ರಿಯ ಪ್ರಭು ಮಧ್ವಾಚಾರ್ಯರ ಪ್ರಿಯ ಮೇಲ್ಗಿರಿ ಪ್ರಸನ್ವೆಂಕಟ ದೊರೆ' 'ಸಿರಿಗುರು ಆನಂದಮುನಿ ದೊರೆಯೆ ನಿತ್ಯ ಪರಸನ್ನ ವೆಂಕಟ ಭಕ್ತರ ಸಿರಿಯೆ' 'ಹರಿಶರಣು ಮಧ್ವಗುರು ಶರಣೆಂಬೋದೆ ಬೀಜ ಮಂತ್ರ' ಎಂದು ಮುಂತಾಗಿ ಮೊರೆ ಇಟ್ಟಿದ್ದಾರೆ. ಇದು ಪ್ರಸನ್ನವೆಂಕಟದಾಸರ ಕೀರ್ತನೆಗಳಲ್ಲಿಯ ವೈಶಿಷ್ಟ್ಯ ಎನ್ನಬಹುದು. ಸುಳಾದಿಯೊಂದರಲ್ಲಿ–

**'ಹರಿ ನಿನ್ನ ಕಥಾಮೃತ ವರ್ಷವು**
**ಚಿರಕಾಲದ ಪುಣ್ಯಾಂಕುರಗಳೊರ್ಧಿಯು**

**ಹರಿ ನಿನ್ನ ಶುಭ ನಾಮ ರಸಾಯನ ಭವರೋಗ**
**ಪರಿಹರ ಕಾರಣವಲ್ಲದೌಷಧ ಉಂಟೆ**
**ಹರಿ ನಿನ್ನ ಧ್ಯಾನ ಧಾರಣ ಬಿಂಬ**
**ದರುಶನ ಕಾರಣವಲ್ಲದನ್ಯ ಸಾಧನ ಜೀವರಿಗುಂಟೆ**
**ಹರಿ ನೀ ವ್ಯಕ್ತನಾದರೆ ಪಾತ್ರನೆನಿಪೆ ನಾ**
**ಕರುಣಿಸೊ ಕರುಣಾಬ್ಧಿ ಪ್ರಸನ್ನವೆಂಕಟ ಕೃಷ್ಣ'**

'ನಾನಾ ಯೋಗ ಯಾಗದೆಡಹಿಗೆ ಪ್ರಾಯಶ್ಚಿತ್ತ –ನೀನೆ ನೀನೆ ನೀನೆ ಪ್ರಸನ್ನವೆಂಕಟ ಕೃಷ್ಣ' ಎಂಬ ಜತೆಯ ಸುಳಾದಿಯ ಮೊದಲ ನುಡಿಯಲ್ಲಿ ಸಾಧಕನು ಸಿದ್ಧಿಯನ್ನು ಪಡೆಯುವ ಸಂಪೂರ್ಣ ವಿವರಗಳನ್ನು ದಾಸರು ಇಲ್ಲಿ ಕೊಡುತ್ತಾರೆ.

ಚಿರಕಾಲದ ಪುಣ್ಯಾಂಕುರದಿಂದಾಗಿ ಭಗವಂತನ ಕಥಾಮೃತದ ವರ್ಷಾಧಾರೆ ಸಾಧಕನಿಗೆ ಸಾಧ್ಯವಾಗುತ್ತದೆ. ಭವರೋಗ ಪರಿಹರಕ್ಕೆ ಆತನ ಶುಭನಾಮ ಸ್ಮರಣೆ ಬಿಟ್ಟು ಇನ್ನೊಂದು ಔಷಧಿ ಇಲ್ಲ. ಇವೆರಡನ್ನು ಸಾಧಿಸಿದಾಗ ಸಹಜವಾಗಿ ಆತನ ಧ್ಯಾನದಿಂದ ಬಿಂಬ ದರುಶನವಾಗುವುದಲ್ಲದೆ ಬೇರೆ ಸಾಧನೆಗಳೇ ಜೀವರಿಗೆ ಇಲ್ಲ. ಭಗವಂತನ ದರುಶನವಾದರೆ ಮಾತ್ರ ಆ ಜೀವ ಪಾತ್ರವೆನಿಸುತ್ತದೆ. ಆದ್ದರಿಂದ ಹಾಗೆ ನನ್ನನ್ನು ಪಾತ್ರನನ್ನಾಗಿ ಮಾಡು ಎಂಬುದು ದಾಸರ ಕೋರಿಕೆ. ಯಾಕೆಂದರೆ ಪ್ರಸನ್ನವೆಂಕಟನಾದ ನೀನು ಕರುಣೆಗಳ ಸಮುದ್ರ, ನನಗೆ ಕರುಣಿಸು ಎಂದು ದಾಸರು ಅಂಗಲಾಚಿದ್ದಾರೆ.

**'ಒಲಿಯಯ್ಯಾ ರಂಗ ಒಲಿಯಯ್ಯಾ**
**ನೆಲೆಗಾಣದ ಭವ ಜಲದೊಳು ಮುಳುಗುವೆ'**

ದಾಸರು ಮತ್ತೆ ಮತ್ತೆ ಭಗವಂತನಲ್ಲಿ ಮೊರೆ ಇಡುತ್ತಿದ್ದಾರೆ. 'ನೆಲೆ ಗಾಣದ ಭವ ಜಲದೊಳು ಮುಳುಗುವೆ' ಎಂಬುದಾಗಿ ಆಳವೇ ಗೊತ್ತಿರದ ಈ ಭವದಲ್ಲಿ ಮುಳುಗುತ್ತಿರುವೆ ಆದ್ದರಿಂದ ನನಗೆ ನಿನ್ನ ದರುಶನವಾಗಬೇಕು,

ಒಲಿಯಬೇಕು ಎಂದಿದ್ದಾರೆ. ಮುಂದಿನ ನುಡಿಯಲ್ಲಿ ಭವದಲ್ಲಿ ಮುಳುಗುತ್ತಿರುವ ಕಾರಣವನ್ನು ಕೊಡುತ್ತಿದ್ದಾರೆ.

**'ಮಾಯದ ಕೈಯಲಿ ಮೇಲೆ ಮೇಲೆ ಸುತ್ತಿ**
**ಆಯಾಸ ಬಡುತಿದೆ ಪ್ರಾಣ, ದಾತ**
**ಬಾಯೆತ್ತಿ ಗೋವಿಂದ ಹರಿಯೆನ್ನಲೀಸದು**
**ಕಾಯೋ ದಯಾಳು ಕರಿವರದ ಕೃಷ್ಣ'**

ಮಾಯದ ಆಕರ್ಷಣೆಯಿಂದಾಗಿ ಭವಸಾಗರದಲ್ಲಿ ಮುಳುಗುತ್ತಿರುವ ಈ ಜೀವ ಕೈಯೆತ್ತಿ ಮೇಲೆ ಮೇಲೆ ಬರಲು ಯತ್ನಿಸುತ್ತಿದೆ. ಆದರೆ ಅಗಲೊಲ್ಲದು. ಆಯಾಸವಾಗುತ್ತಿದೆ. ಈ ಭವದಲ್ಲಿ ಎಷ್ಟೊಂದು ಮುಳುಗಿರುವೆನೆಂದರೆ ದಾತನಾದ ನಿನ್ನನ್ನು ಬಾ, ನನ್ನನ್ನು ಎತ್ತಿಕೊ ಗೋವಿಂದ, ಹರಿ ಎಂದು ಕರೆಯಲೂ ಕೂಡ ಆಗಲೊಲ್ಲದು. ಆದ್ದರಿಂದ ಪಾರು ಮಾಡಿ ನನ್ನನ್ನು ಕಾಯಬೇಕು ಎಂದು ಮೊರೆ ಇಡುತ್ತಿದ್ದಾರೆ. ನಾನು, ನನ್ನದು ಎಂಬ ಈ ಜಗತ್ತಿನ ಆಕರ್ಷಣೆಯಿಂದ ಬಿಟ್ಟು ಬರದ ಜೀವದ ಸುಂದರ ಚಿತ್ರಣವನ್ನು ದಾಸರು ಮನಸ್ಸಿಗೆ ತಟ್ಟುವಂತೆ ಹೇಳಿದ್ದಾರೆ.

ಮತ್ತೊಂದು ಕೀರ್ತನೆಯಲ್ಲಿ ತಮ್ಮನ್ನು ಬರೀ ಕಾಯಬೇಕು, ಎತ್ತಬೇಕು ಎಂದಷ್ಟೆ ಹೇಳುವುದಿಲ್ಲ. ಮುಂದುವರಿದು ತಮಗೆ ಬೇಕಾದದ್ದನ್ನು ಸ್ಪಷ್ಟವಾಗಿ ಹೇಳುತ್ತಾರೆ.

**'ವೆಂಕಟೇಶ ಶ್ರೀ ವೆಂಕಟೇಶ ಪಾಲಿಸು**
**ಕಿಂಕರನ ವೆಂಕಟೇಶ'**

ಎಂಬ ಪಲ್ಲವಿಯ 5 ನುಡಿಗಳ ಕೀರ್ತನೆಯ ಕೊನೆಯ ನುಡಿಯಲ್ಲಿ–

**'ನಂಬಿದೆ ನಂಬಿದೆ ನಂಬಿದೆ ನಿನ್ನ ಪಾದ**
**ಡಿಂಬಿನೊಳಡು ವೆಂಕಟೇಶ**

**ಬಿಂಬ ಮೂರುತಿ ಪ್ರಸನ್ವೆಂಕಟೇಶ ಪ್ರತಿ**
**ಬಿಂಬಕ್ಕರುಹು ವೆಂಕಟೇಶ'**

ಎಂಬುದಾಗಿ ಬಿಂಬದ ಸಾಕ್ಷಾತ್ಕಾರದೊಂದಿಗೆ ಪ್ರತಿಬಿಂಬಕ್ಕೆ ಅದನ್ನು ತಿಳಿ ಹೇಳು ಎನ್ನುತ್ತಾರೆ. ಇದುವೆ ಪ್ರತಿಯೊಬ್ಬ ಸಾಧಕನ ಬಯಕೆಯಾಗಿದೆ. ಅದಕ್ಕಾಗಿ ಮತ್ತೊಂದು ಕೀರ್ತನೆಯಲ್ಲಿ ಭಗವಂತನಿಗೆಯೇ ಇದನ್ನು ಹೇಗೆ ಮಾಡಬೇಕು ಎಂಬ ದಾರಿಯನ್ನು ತೋರಿದ್ದಾರೆ.

**'ಪಾಲಿಸೋ ಮಾಧವ ಈ ತೆರದಲಿ'** ಎಂದು ಅವನಿಗೆಯೇ ಈ ತೆರನಾಗಿ ನನ್ನನ್ನು ಪಾಲಿಸು ಎನ್ನುತ್ತಾರೆ.

**'ನಿನ್ನನೇ ಹಾಡಿ, ನಿನ್ನವರ ಕೂಡಿಸಿ । ನಿನ್ನ ಸಾಹಸ**
**ಕೀರ್ತಿಯನ್ನೇ ಕೇಳಿಸುವಂತೆ ॥**
**ನೀಚರಾಧೀನ ಮಾಡಿ ನಾಚಿಸಬೇಡ ಸ । ದಾಚಾರ ವೃತ್ತಿಯ**
**ಆಚರಿಪಂತೆನ್ನ ॥**
**ನೀ ಮರೆಸದಿರು ಶ್ರೀ ನಾಮವ ಜಿಹ್ವೆಗೆ । ಸ್ವಾಮಿ ಪ್ರಸನ್ವೆಂಕಟ**
**ಮನೋಹರ ಕೃಷ್ಣ ॥**

ವಿವರಣೆ ಬೇಕಿಲ್ಲ. ಆದರೆ ಇದನ್ನೆಲ್ಲ ನೀನು ಯಾಕೆ ಮಾಡಬೇಕು ಎಂಬುದನ್ನು ತಮ್ಮ ಕೀರ್ತನೆಯೊಂದರಲ್ಲಿ ಹೀಗೆ ನಿವೇದಿಸಿಕೊಳ್ಳುತ್ತಾರೆ.

**'ತಪ್ಪುಗಳನೆಲ್ಲ ಪರಿಹರಿಸುವ ನ । ಮ್ಮಪ್ಪನಲ್ಲವೆ ನೀನು ॥**
**ಒಪ್ಪಿದ ಬಳಿಕವಗುಣಗಳ ನೋಡದ ತಿ । ಮ್ಮಪ್ಪನಲ್ಲವೆ ನೀನು ॥**

ಎಂದು ಪ್ರಾರಂಭವಾಗುವ 5 ನುಡಿಗಳ ಸುದೀರ್ಘ ಕೀರ್ತನೆಯಲ್ಲಿ ತಪ್ಪುಗಳ ಪಟ್ಟಿಯನ್ನು ಮಾಡಿದ್ದಾರೆ. ಪ್ರತಿಯೊಬ್ಬ ಸಾಧಕನಿಗೂ ಅತ್ಯಂತ ಮಾರ್ಗದರ್ಶಿಯಾದ ಕೀರ್ತನೆ. ಬೆಳಗಿನ ಜಾವದಿಂದ ಮಲಗುವವರೆಗೆ ಮಾಡುವ ತಪ್ಪುಗಳನ್ನು ಇಲ್ಲಿ ತೋರಿಸಿದ್ದಾರೆ. ಆಚಾರ್ಯರ ಸದಾಚಾರ ಸ್ಮೃತಿಯ ಕನ್ನಡೀಕರಣ. ಇದನ್ನು ಬಹುತೇಕ ದಾಸರೆಲ್ಲ ಪಟ್ಟಿ ಮಾಡಿದ್ದಾರೆ.

ಒಂದು ಸಲ ಭಗವಂತನ ಕೃಪೆಯಾದರೆ ಸಾಕು. ಅವನಿಗೆ ಯಾರ ಅಂಜಿಕೆಯೂ ಇಲ್ಲ. ಪ್ರಸನ್ವೆಂಕಟದಾಸರಿಗೆ ಕೃಪೆಯಾಗಿದೆ. ಅಂತೆಯೇ ಅವರು ಹೇಳಿದರು.

**'ಅಂಜಿಕ್ಯಾಕೆನಗಂಜಿಕೆ । ಕಂಜನಾಭ ಶ್ರೀನಿವಾಸನ**
**ದಯವಿರಲು ॥'**

ಎಂದು ಇನ್ನು ಅಂಜಿಕೆ ಇಲ್ಲ. ಶ್ರೀನಿವಾಸನ ಕೃಪೆಯಾಗಿದೆ. ಅವರಿಗೆ ಇನ್ನು ಯಾವ ಯಾರ ಅಂಜಿಕೆಯೂ ಇಲ್ಲ.

**'ಅಶನ ವಸನವನ್ನು ಕುಳಿತಲ್ಲೆ ನಡೆಸುವ । ನಿಶಿದಿನ**
**ನೀಚರಾಧೀನ ಮಾಡದೆ ॥**
**ಹಸನಾಗಿ ತನ್ನಂಘ್ರಿ ನೆರಳೊಳು ಬಚ್ಚಿಟ್ಟು । ಕುಶಲದಿ ದೊರೆಯ**
**ನಂಬಿದ ಬಳಿಕ ॥**
**ಆವಾವ ಕಾಲದಿ ಆವಾವ ದೇಶದಿ । ಸೇವೆಗೆ ನಾ ತಪ್ಪೆ ಕೃಪೆ**
**ತಪ್ಪಿಸ ॥**
**ಭಾವಿಕರೊಡೆಯ ಪ್ರಸನ್ವೆಂಕಟಾದ್ರೀಶ । ಸಾವು ಕಳೆದು**
**ಜೀವಕಾಶ್ರಯನಾಗಿರೆ ॥**

ಪ್ರತಿಯೊಬ್ಬರು ಬಯಸುವುದು ಇದನ್ನೇ, 'ಸಾವು ಕಳೆದು ಜೀವಕೆ ಭಗವಂತನು ಆಶ್ರಯ ಕೊಡಬೇಕು' ಆದರೆ ಇರುವವರೆಗೆ ಅಂಜಿಕೆ ತಪ್ಪಿದ್ದಲ್ಲ. ಅಂಜುವುದಿಲ್ಲ ಎಂದು ಹೇಳುವ ದಾಸರು

**'ಅಂಜುವನದಕೆ ಕೃಷ್ಣ ಅಭಯವ ಕೋರಿದಕೆ'**

**ನೀನಿತ್ತ ಮತಿಯಿಂದ ನಿನ್ನ ಹೊಗಳುತಿರೆ । ಹೀನ**
**ಮಾನವರೊಂದೊಂದೂಣೆಯ ನುಡಿವರು**
**ಮಾಧವ ನಾನೇನು ಓದಿದವನಲ್ಲ ಶ್ರೀ । ಪಾದವೇ ಗತಿಯೆಂಬೆ**
**ಬಾಧಿಸುತ್ತೈದಾರೆ ॥**

**ಅಪರಿಮಿತಪರಾಧಿ ಕಪಟಿ ನಾನಾಗಿರೆ । ಅಪರೋಕ್ಷಿಯೆಂದೆಂಬ**
**ಕುಪಿತ ಖಳರ ನೋಡಿ ॥**
**ಹಿತಶತ್ರುಗಳ ಸಂಗತಿ ಸಾಕು ಪ್ರಸನ್ವೆಂಕಟ । ಪತಿ ನಿನ್ನ ಭಕ್ತರ**
**ಸಂಗ ಕೊಡು ಕಾಣೊ ॥**

ಇದು ಇಂದಿನ ಕಾಲದಲ್ಲಿ ಇನ್ನೂ ಅಧಿಕವಾಗಿ ನಡೆಯುತ್ತದೆ. ಅಪರೋಕ್ಷ ಜ್ಞಾನಿಗಳಾದ ದಾಸರಿಗೆ ಕೂಡ ಈ ಹಿತಶತ್ರುಗಳ ಕಾಟ ತಪ್ಪಲಿಲ್ಲ. ಇನ್ನು ಹುಲು ಮಾನವರ ಪಾಡೇನು ? ಅವರು ತಮ್ಮ ಮುಗ್ಧ ಭಾವನೆಗಳನ್ನು ಬಿಡಿಸಿ ಇಟ್ಟಿದ್ದಾರೆ. ತಮ್ಮಷ್ಟಕ್ಕೆ ತಾವು ಭಗವಂತನ ನಾಮಸ್ಮರಣೆ ಮಾಡಿದರು. ಜನರು ಒಂದೊಂದು ರೀತಿಯಾಗಿ ಹಂಗಿಸಿದರು. ಅದಕ್ಕಾಗಿ ಅವರು ಹಿತಶತ್ರುಗಳ ಸಂಗತಿ ಸಾಕು ಎಂದು ಪರಮಾತ್ಮನಲ್ಲಿ ಮೊರೆ ಇಟ್ಟಿದ್ದಾರೆ.

ಅವರು ಅಪರೋಕ್ಷಜ್ಞಾನಿಗಳಾಗಿದ್ದರು ಎಂಬುದು ಈ ಕೀರ್ತನೆಯಿಂದ ಸ್ಪಷ್ಟವಾಗುತ್ತದೆ. ಬಿಂಬಾಪರೋಕ್ಷವಾಗಿತ್ತು. ಅದನ್ನು ಅವರು ತಮ್ಮ ಇನ್ನೊಂದು ಕೀರ್ತನೆಯಲ್ಲಿ ಇನ್ನಷ್ಟು ಸ್ಪಷ್ಟ ಪಡಿಸಿದ್ದಾರೆ. ಅದೀಗ ತುಂಬಾ ಜನಪ್ರಿಯ ಕೀರ್ತನೆ.

**'ತಪ್ಪು ನೋಡದೆ ಬಂದೆಯಾ ಎನ್ನಯ ತಂದೆಯೆ**
**ಅಪ್ಪ ತಿರುವೆಂಗಳೆಶನೆ ನಿರ್ದೋಷನೆ'**

ಪ್ರಸನ್ವೆಂಕಟದಾಸರ ಕೀರ್ತನೆಗಳಲ್ಲೆಲ್ಲ ಅತ್ಯಂತ ಸುಂದರವಾದ ಮನಸ್ಸಿಗೆ ತಟ್ಟುವ ಕೀರ್ತನೆ. ಪ್ರತಿಯೊಬ್ಬ ಸಾಧಕ, ತಾನು ಎಷ್ಟೇ ಸಾಧನೆಯನ್ನು ಮಾಡಿದರೂ ಅದು ಸಾಧಕನ ದೃಷ್ಟಿಯಿಂದ ಅಪೂರ್ಣವೇ. ಆದರೆ ಭಗವಂತನ ದೃಷ್ಟಿಯಲ್ಲಿ ಚಿಕ್ಕ ಸಾಧನವೂ ಆತನ ಕೃಪೆಯನ್ನು ತಂದು ಕೊಡಬಲ್ಲುದು. ಅದನ್ನು ದಾಸರು ಇಲ್ಲಿ ಹೇಳಿದ್ದಾರೆ.

**'ಆಪಾದಮೌಳಿ ಎನ್ನೊಳು ಅಘ ಬಹಳ ।**
**ಶ್ರೀಪತಿ ಕ್ಷಮಿಸಿ ಕಾಯಿದೆಯಾ ಉಧದಿಶಯ್ಯಾ ॥**

**ಜಗದಘಹರನೆಂಬುದು ನಿನ್ನ ಬಿರುದು ।**
**ತ್ರಿಗುಣಾತೀತನೆ ರಾಮನೆ ಗುಣಧಾಮನೆ ॥**
**ಇನ್ನೆನ್ನ ಕಲುಷವಾರಿಸೊ ಭವ ತಾರಿಸೊ ಪ್ರ ।**
**ಸನ್ನ ವೆಂಕಟರಮಣ ಭಯಶಮನ ॥**

ಉಂಗುಷ್ಠದಿಂದ ನೆತ್ತಿಯವರೆಗೂ ಪಾಪಗಳು ತುಂಬಿವೆ, ಆದರೂ ಸಾಗರಶಯನನಾದ ಭಗವಂತನು ಕಾಯ್ದನು. ಅದು ಅವನ ಕಾರುಣ್ಯ. ಯಾಕೆಂದರೆ ಜಗತ್ತಿನ ಪಾಪಗಳನ್ನೆಲ್ಲ ಹೋಗಲಾಡಿಸುವನೆಂಬುದು ಅವನ ಬಿರುದಾಗಿದೆ. ಪರಮಾತ್ಮನು ತ್ರಿಗುಣಾತೀತನು. ಅಗಣಿತ ಗುಣಗುಣ ಪರಿಪೂರ್ಣನಾದ ಶ್ರೀ ರಾಮನು. ಪ್ರಸನ್ನವೆಂಕಟದಾಸರ ದೋಷಗಳನ್ನೆಲ್ಲ ದೂರಮಾಡಿ ಭವಸಾಗರದಿಂದ ಮುಕ್ತನನ್ನಾಗಿ ಮಾಡಿದ್ದಾರೆ.

ಇದಿಷ್ಟು ಪ್ರಸನ್ನವೆಂಕಟದಾಸರ ನೂರಾರು ಆತ್ಮನಿವೇದನೆಯ ಕೀರ್ತನೆಗಳಲ್ಲಿಯ ಕೆಲವನ್ನು ನೋಡಿದ್ದಾಯಿತು. ಅವರ ಕೀರ್ತನೆಗಳೆಲ್ಲ ಮುತ್ತು ರತ್ನಗಳೆ, ಯಾವುದನ್ನು ತೆಗೆದುಕೊಳ್ಳಬೇಕು, ಯಾವುದನ್ನು ಬಿಡಬೇಕು. ವಿಸ್ತಾರಭಯದಿಂದ ಕೆಲವು ಮುತ್ತುಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ.

ಆತ್ಮನಿವೇದನೆಯ ಕೀರ್ತನೆಗಳೆಂದು ಇವುಗಳನ್ನು ನೋಡಿದೆ. ಆದರೆ ಪ್ರಸನ್ನವೆಂಕಟದಾಸರೇ ತಮ್ಮದೊಂದು ಕೀರ್ತನೆಯಲ್ಲಿ 'ಆತ್ಮನಿವೇದನೆ' ಭಕ್ತಿಯ ಬಗ್ಗೆಯೇ 5 ನುಡಿಗಳ ಒಂದು ಸುಂದರ ಕೀರ್ತನೆಯನ್ನು ರಚಿಸಿದ್ದಾರೆ. ಅದರಲ್ಲಿ ಯಾವುದು ಆತ್ಮ ನಿವೇದನ ಎಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ಕೀರ್ತನೆ ಪ್ರಾರಂಭವಾಗುವುದು ಹೀಗೆ–

**ಆತ್ಮ ನಿವೇದನ ಭಕುತಿ ತ ।**
**ನ್ನಾತ್ಮವನೀವ ಪರಮಾತ್ಮ ವಿಶ್ವಾತ್ಮನಿಗೆ ॥ ಪ ॥**

**ಸರ್ವಕರ್ಮಕರ್ತ ಸರ್ವಕಾಲವರ್ತ ।**
**ಸರ್ವ ಕಾರ್ಯಕೆ ಹರಿ ಸ್ವತಂತ್ರನು ॥**

**ಸರ್ವಾರ್ಥದಲಿಪೂರ್ಣ ಸರ್ವೇಂದ್ರಿಯನಿಯಂತ್ರ ।**
**ಸರ್ವದೇಶ ಕಾಲವ್ಯಾಪ್ತ ಗೋಪ್ತನೆಂದು ॥ ೧ ॥**

**ಕಾಸು ಕೋಶ ಗೇಹ ದೇಹೇಂದ್ರಿಯ ಪ್ರಾಣ ।**
**ಸ್ತ್ರೀ ಸುತ ಪ್ರಿಯ ದಾಸಿ ದಾಸರನು ॥**
**ಈಶಗರ್ಪಣೆ ಮಾಡಿ ದಾಸದಾಸನಾಗಿ ।**
**ಲೇಶವು ತನಗೆನ್ನದೆ ಸರ್ವಾರ್ಪಿಸುವುದು ॥ ೨ ॥**

**ಜನ್ಮ ಜನ್ಮಾಂತರ ಧರ್ಮ ಕರ್ಮಂಗಳು ।**
**ನಿರ್ಮಲ ಜ್ಞಾನ ವೈರಾಗ್ಯ ಭಕ್ತಿ ॥**
**ಸ್ವರ್ಮಂದಿರ ಭವಯಾತ್ರೆ ಗರ್ಭಯಾತ್ರೆ ।**
**ರಮೆಯ ರಮಣಗರ್ಪಣವೆಂಬ ನಿಷ್ಠೆಯ ॥ ೩ ॥**

**ಅಹರ್ನಿಶಿ ಶ್ವಾಸೋಚ್ಛ್ವಾಸಾವಸ್ಥಾತ್ರಯ ।**
**ಬಹು ಜಪತಪ ಅರ್ಚನೆ ಸಂಭ್ರಮ ॥**
**ಬಹುಭಿಃಶ್ರವಣ ಬಹುಧಾ ಶ್ರವಣ ಮನನ ।**
**ಶ್ರೀ ಹರಿಧ್ಯಾನ ಧ್ಯಾಸಾತ್ಮಾರ್ಥದಿ ॥ ೪ ॥**

**ಅಲಂಬುದ್ಧಿಯನು ಬಿಟ್ಟು ಅಲಸ ಮತಿಯನು ಬಿಟ್ಟು ।**
**ಅಲಸಲಕ್ಷಣ ವಿಸ್ಮೃತಿಯನು ನೀಗಿ ॥**
**ಅಲವಬೋಧಾಚಾರ್ಯ ಮತದವರನು ಪೊಂದಿ ।**
**ಲಲಿತ ಪ್ರಸನ್ವೆಂಕಟ ಚತುರಾತ್ಮಗೆ ॥ ೫ ॥**

ಇದು ಪ್ರಸನ್ನವೆಂಕಟದಾಸರ ಆತ್ಮನಿವೇದನೆಯ ಪರಿ. ಪರಮಾತ್ಮನಲ್ಲಿ ಅಂಥ ಆತ್ಮನಿವೇದನೆಯ ಭಕ್ತಿಯನ್ನು ಪ್ರಸನ್ನ ವೆಂಕಟದಾಸಾಂತರ್ಗತ ಆನಂದಮುನಿ ಪ್ರಿಯ ಪ್ರಸನ್ನವೆಂಕಟನು ನಮನಿಮಗೆಲ್ಲ ದಯಪಾಲಿಸಲಿ.

❑❑